	ಸಂಘಗಳಿಗೆ ತುಂಬಿಕೊಡಬೇಕಾದ ಹಣ (2005–06)	
5	ವಿಫಲಬಾವಿ ಪರಿಹಾರ ಯೋಜನೆ–ಯಡಿ ಬಾಕಿ ಇರುವ ಹಣ ಬಿಡುಗಡೆ (ಹಲವಾರು ವರ್ಷಗಳಿಂದ)	ರೂ. 10.91 ಕೋಟಿ
6	ಅತಿ ಹೆಚ್ಚಿನ ಆತ್ಮಹತ್ಯೆ ಒಳಗಾದಂತಹ ಜಿಲ್ಲೆಗಳಲ್ಲಿನ ರೈತರ ಪುನರ್ವಸತಿಗಾಗಿ ಪರಿಹಾರ ಯೋಜನೆ (2006–07)	(ಅಂದಾಜು) ರೂ. 49.48 ಕೋಟಿ
7	ಶೇ.4ರ ಬಡ್ಡಿದರದಲ್ಲಿ ರೈತರಿಗೆ ಸಾಲ ನೀಡಿಕೆ ಯೋಜನೆಯಡಿ ಬಡ್ಡಿ ಸಹಾಯಧನ (2006–07)	(ಅಂದಾಜು) ರೂ. 141.12 ಕೋಟಿ
8	2006–07ನೇ ಸಾಲಿನ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆ	ರೂ. 1550.00 ಕೋಟಿ
	ಒಟ್ಟು	**ರೂ. 1943.25 ಕೋಟಿ**

1171 (1274) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ತೋಟಗಾರಿಕೆ ಇಲಾಖೆಗೆ ಒದಗಿಸಿರುವ ಹಣದ ಮೊತ್ತವೆಷ್ಟು;

ಆ) ಇದರಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಈ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು;

ಇ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳನ್ನು ಉತ್ತೇಜಿಸಲು ಸರಕಾರದ ಮುಂದಿರುವ ಕ್ರಮಗಳೇನು;

ಈ) ರಾಜ್ಯದಲ್ಲಿ ತೋಟಗಾರಿಕಾ ಮಿಷನ್‌ನ ಕಾರ್ಯಕ್ರಮಕ್ಕೆ ಸರಕಾರ ಕೈಗೊಂಡಿರುವ ಕ್ರಮಗಳೇನು;

ಉ) ಇದಕ್ಕೆ ಆಯ್ಕೆಯಾಗಿರುವ ಜಿಲ್ಲೆಗಳು ಯಾವುವು; ಬೀದರ್ ಜಿಲ್ಲೆಯನ್ನು ಈ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆಯೇ; ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ವೆಚ್ಚ ಮಾಡಲಾಗುತ್ತಿರುವ ಹಣವೆಷ್ಟು (ವಿವರ ನೀಡುವುದು)?

ಶ್ರೀ ಶಶಿಕಾಂತ (ತೋಟಗಾರಿಕೆ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ತೋಟಗಾರಿಕೆ ಇಲಾಖೆಗೆ ಒದಗಿಸಿರುವ ಹಣದ ಮೊತ್ತ ರೂ. 133 ಕೋಟಿಗಳು.

ಆ) ಈ ಸಾಲಿನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತೆಗೆದುಕೊಳ್ಳಲಾಗುವ ಕಾರ್ಯಕ್ರಮಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳನ್ನು ಉತ್ತೇಜಿಸಲು ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

1. ರೈತರ ಕ್ಷೇತ್ರಗಳಲ್ಲಿ ಇಸ್ರೇಲಿ ತಂತ್ರಜ್ಞಾನದ ಅಳವಡಿಕೆಗಾಗಿ ಪ್ರಾಯೋಗಿಕ ಯೋಜನೆ.
2. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ.
3. ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ.
4. ತೋಟಗಾರಿಕೆ ಕಟ್ಟಡಗಳು.
5. ವಿಸ್ತರಣೆ ಮತ್ತು ತರಬೇತಿ.
6. ತೋಟಗಾರಿಕೆ ಉದ್ಯಾನವನಗಳು.
7. ಬೀದರ್‌ನಲ್ಲಿ ತೋಟಗಾರಿಕೆ ಕಾಲೇಜು.

ಈ) ಅನುಬಂಧ–2ರಲ್ಲಿ ನೀಡಲಾಗಿದೆ.

ಉ) ರಾಜ್ಯದಲ್ಲಿ ತೋಟಗಾರಿಕಾ ಮಿಷನ್ ಅಡಿ ಈ ಕೆಳಕಂಡ ಜಿಲ್ಲೆಗಳು ಆಯ್ಕೆಯಾಗಿರುತ್ತವೆ.

ಕ್ರ.ಸಂ.	ಜಿಲ್ಲೆಗಳು
1	ಬೆಂಗಳೂರು (ಗ್ರಾ)
2	ತುಮಕೂರು
3	ಕೋಲಾರ
4	ಮೈಸೂರು
5	ಕೊಡಗು
6	ಹಾಸನ
7	ದಕ್ಷಿಣ ಕನ್ನಡ
8	ಉಡುಪಿ

9	ಉತ್ತರ ಕನ್ನಡ
10	ಚಿತ್ರದುರ್ಗ
11	ಕೊಪ್ಪಳ
12	ಬೆಳಗಾವಿ
13	ಬಾಗಲಕೋಟೆ
14	ಬಿಜಾಪುರ
15	ಗುಲ್ಬರ್ಗ
16	ಚಿಕ್ಕಮಗಳೂರು
17	ಶಿವಮೊಗ್ಗ

ಬೀದರ್ ಜಿಲ್ಲೆಯನ್ನು ರಾಜ್ಯದಲ್ಲಿ ತೋಟಗಾರಿಕಾ ಮಿಷನ್‌ನಲ್ಲಿ ಸೇರಿಸಲಾಗಿಲ್ಲ. ಆದರೆ ಪ್ರಸಕ್ತ ಸಾಲಿನಲ್ಲಿ ಕೆಳಕಾಣಿಸಿದ ಕಾರ್ಯಕ್ರಮಗಳಿಗೆ 25.3 ಲಕ್ಷ ರೂ.ಗಳನ್ನು ವಿನಿಯೋಗಿಸಲು ಉದ್ದೇಶಿಸಲಾಗಿದ್ದು, 2007–08 ನೇ ಸಾಲಿನ ಕ್ರಿಯಾಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

- ಸಗಟು ಮತ್ತು ಗ್ರಾಮಾಂತರ ಮಾರುಕಟ್ಟೆಗಳ ನಿರ್ಮಾಣ, ಅಭಿವೃದ್ಧಿ ಮತ್ತು ಪುನಶ್ಚೇತನ ಕಾರ್ಯಕ್ರಮಕ್ಕೆ ಸಹಾಯಧನ.
- ಸುರಕ್ಷಿತ ಸಾಗಾಣಿಕೆಗೆ Refrigerated Van ಖರೀದಿ, ಶೈತ್ಯಾಗಾರಘಟಕ, ಶೀತಲ ಗೃಹಗಳ ಸ್ಥಾಪನೆಗೆ ಸಹಾಯಧನ.
- ಸಣ್ಣ ಮತ್ತು ದೊಡ್ಡ ಪ್ರಮಾಣದ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.
- ಸಾವಯವ ತೋಟಗಾರಿಕೆ, ಎರೆಹುಳುಗೊಬ್ಬರ, ಜೈವಿಕ ಗೊಬ್ಬರ ಮತ್ತು ಜೈವಿಕ ನಿಯಂತ್ರಕಗಳ ಉತ್ಪಾದನಾ ಘಟಕಗಳ ಅಭಿವೃದ್ಧಿ ಸಮಗ್ರ ಕೀಟ ಹಾಗೂ ಪೋಷಕಾಂಶ ನಿರ್ವಹಣೆ ಇತ್ಯಾದಿ.

ಅನುಬಂಧ–1

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತೆಗೆದುಕೊಳ್ಳಲಾಗುವ ಕಾರ್ಯಕ್ರಮಗಳು

1. ನಿರ್ದೇಶನ ಮತ್ತು ಆಡಳಿತ
2. ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳಿಗಾಗಿ ಹನಿ ನೀರಾವರಿ ಯೋಜನೆ
3. ರೈತರ ಕ್ಷೇತ್ರಗಳಲ್ಲಿ ಇಸ್ರೇಲಿ ತಂತ್ರಜ್ಞಾನದ ಅಳವಡಿಕೆಗಾಗಿ ಪ್ರಾಯೋಗಿಕ ಯೋಜನೆ
4. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ
5. ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ
6. ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ
7. ತೋಟಗಾರಿಕೆ ಕಟ್ಟಡಗಳು
8. ವಿಸ್ತರಣೆ ಮತ್ತು ತರಬೇತಿ
9. ತೋಟಗಾರಿಕೆಯಲ್ಲಿ ಸಂಸ್ಕರಣೆ
10. ಕರ್ನಾಟಕ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮಕ್ಕೆ ಬೆಂಬಲ
11. ತೋಟಗಾರಿಕೆ ಉದ್ಯಾನವನಗಳು
12. ಸೂಕ್ಷ್ಮ ನೀರಾವರಿ
13. ಮಾರುಕಟ್ಟೆ ಹಾಗೂ ಸಂಗ್ರಹಣೆಗಾಗಿ ಗ್ರಾಮೀಣ ಮೂಲ ಸೌಕರ್ಯ
14. ಹೊಸ ತರಕಾರಿ ತಳಿಗಳನ್ನು ಪರಿಚಯಿಸುವ ಯೋಜನೆ
15. ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯ
16. ಅಂತರ ರಾಷ್ಟ್ರೀಯ ಕೃಷಿ ವ್ಯಾಪಾರ ಮೇಳ
17. ದ್ರಾಕ್ಷಾರಸ ನೀತಿ
18. ಬ್ಯಾಕ್ಟೀರಿಯಾ ತೊಂದರೆ ಮೇಲೆ ಮುಂದುವರಿದ ಸಂಶೋಧನೆ
19. ತೋಟಗಾರಿಕೆ ಯಾಂತ್ರಿಕರಣ
20. ಬೀದರ್‌ನಲ್ಲಿ ತೋಟಗಾರಿಕೆ ಕಾಲೇಜು

21. ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ
22. ಪ್ರಚಾರ ಮತ್ತು ಸಾಹಿತ್ಯ
23. ಶೀಥಲ ಗೃಹಗಳ ಸಹಾಯಧನ ಯೋಜನೆ
24. ರೈತರಿಗಾಗಿ ತರಬೇತಿ
25. ರೈತರಿಗಾಗಿ ಸಹಾಯ
26. ಮಂಡಳ ನರ್ಸರಿಗಳ ಅಭಿವೃದ್ಧಿ
27. ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ
28. ತೆಂಗು ಉತ್ಪಾದಕತೆ ಅಭಿವೃದ್ಧಿಗಾಗಿ ಸಮಗ್ರ ಬೇಸಾಯ
29. ರಾಷ್ಟ್ರೀಯ ತೋಟಗಾರಿಕೆ ಮಿಷನ್
30. ವಿಶೇಷ ಘಟಕ ಯೋಜನೆ (ರಾಜ್ಯ)
31. ಗಿರಿಜನ ಉಪಯೋಜನೆ (ರಾಜ್ಯ)

ಸಂಖ್ಯೆ: ಕೃತೋಇ 413 ತೋಇವಿ 2007

ಅನುಬಂಧ–2

ರಾಜ್ಯದಲ್ಲಿ ತೋಟಗಾರಿಕಾ ಮಿಷನ್‌ನ ಕಾರ್ಯಕ್ರಮಕ್ಕೆ ಸರಕಾರ ಕೈಗೊಂಡಿರುವ ಕ್ರಮಗಳು

ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನ ಕಾರ್ಯಕ್ರಮದಡಿ ಸಣ್ಣ, ಅತಿ ಸಣ್ಣ ರೈತರು ಮತ್ತು ಇತರೇ ರೈತರಿಗೆ ಅವರು ಹೂಡು ಬಂಡವಾಳ ಮತ್ತು ಯೋಜನೆಯ ಕಾರ್ಯಕ್ರಮಗಳಿಗನುಗುಣವಾಗಿ ಪ್ಲಾಂಟೇಷನ್ ಮತ್ತು ಮೂಲಸೌಕರ್ಯಾಭಿವೃದ್ಧಿ, ಪ್ರದೇಶ ವಿಸ್ತರಣೆ ಮತ್ತು ಕಟಾವಿನ ನಂತರದ ನಿರ್ವಹಣೆಗಾಗಿ ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಶೇ. 25 ರಿಂದ ಶೇ. 100 ರವರೆಗೆ ಸಹಾಯಧನ ನೀಡುವ ಅವಕಾಶವಿರುತ್ತದೆ.

- ಈ ಯೋಜನೆಯಡಿ ಆಯ್ದು ಹಣ್ಣು, ಹೂವು, ತೋಟದ ಬೆಳೆ, ಸಾಂಬಾರು ಹಾಗೂ ಇನ್ನಿತರ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ.
- ಮಳೆ ನೀರು ಕೊಯ್ಲು ಹಾಗೂ ಸಂಗ್ರಹಣೆ ಮತ್ತು ಜಲಾಭಿವೃದ್ಧಿಗೋಸ್ಕರ ಕೃಷಿಹೊಂಡಗಳು, ಸಮುದಾಯ ಕೆರೆಗಳ ನಿರ್ಮಾಣಕ್ಕೆ ಸಹಾಯಧನ.

- ಪ್ರದೇಶ ವಿಸ್ತರಣೆಗೆ ಬೇಕಾಗುವ ಕಸಿ/ಸಸಿ/ ಬೀಜ ಉತ್ಪಾದನೆಗೆ ನರ್ಸರಿಗಳ ಸ್ಥಾಪನೆ ಮತ್ತು ಅಭಿವೃದ್ಧಿ.
- ವಾಣಿಜ್ಯ ಹೂ ಬೆಳೆಗಳ ರಕ್ಷಿತ ಬೇಸಾಯಕ್ಕೆ ಹಸಿರುಮನೆ ಹಾಗೂ ಶೇಡ್‌ನೆಟ್‌ಗಳಿಗೆ ಪ್ರೋತ್ಸಾಹ.
- ಬೆಳೆದ ಬೆಳೆಯು ಮಾರುಕಟ್ಟೆಗೆ ಸಾಗಿಸುವ ಮುಂಚಿತವಾಗಿ ಹಾಳಾಗದಂತೆ ಸೋಡಿಕೊಳ್ಳುವುದಕ್ಕಾಗಿ ಕೊಯ್ಲು ಕೇಂದ್ರಗಳ ಸ್ಥಾಪನೆ ಹಾಗೂ ಒಳಗಿರುವ ಮತ್ತು ಸಂರಕ್ಷಣಾ ಘಟಕಗಳ ನಿರ್ಮಾಣ.
- ಸಗಟು ಮತ್ತು ಗ್ರಾಮಾಂತರ ಮಾರುಕಟ್ಟೆಗಳ ನಿರ್ಮಾಣ, ಅಭಿವೃದ್ಧಿ ಮತ್ತು ಪುನಃಶ್ಚೇತನ ಕಾರ್ಯಕ್ರಮಕ್ಕೆ ಸಹಾಯಧನ.
- ಸುರಕ್ಷಿತ ಸಾಗಾಣಿಕೆಗೆ Refrigerated Van ಖರೀದಿ, ಶೈತ್ಯಾಗಾರಘಟಕ, ಶೀತಲಗೃಹಗಳ ಸ್ಥಾಪನೆಗೆ ಸಹಾಯಧನ.
- ಸಣ್ಣ ಮತ್ತು ದೊಡ್ಡ ಪ್ರಮಾಣದ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.
- ಸಾವಯವ ತೋಟಗಾರಿಕೆ, ಎರೆಹುಳುಗೊಬ್ಬರ, ಜೈವಿಕ ಗೊಬ್ಬರ ಮತ್ತು ಜೈವಿಕ ನಿಯಂತ್ರಕಗಳ ಉತ್ಪಾದನಾ ಘಟಕಗಳ ಅಭಿವೃದ್ಧಿ, ಸಮಗ್ರ ಕೀಟ ಹಾಗೂ ಪೋಷಕಾಂಶ ನಿರ್ವಹಣೆ ಇತ್ಯಾದಿ.

1172 (1275) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 1 ವರ್ಷದಿಂದ ಇಲ್ಲಿಯವರೆಗೆ ಎಷ್ಟು ಜನ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ಎತ್ತು ಮತ್ತು ಎತ್ತಿನ ಗಾಡಿಗಳನ್ನು ವಿತರಣೆ ಮಾಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಆ) ಇದಕ್ಕಾಗಿ ಪ್ರತಿ ಜಿಲ್ಲೆಗೆ ತಗುಲಿರುವ ವೆಚ್ಚವೆಷ್ಟು;